ಸುವರ್ಣ ಕರ್ನಾಟಕ

ಕರ್ನಾಟಕ ಸರ್ಕಾರ

# ಜಿಲ್ಲಾ ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬಾಗಲಕೋಟೆ

ಫೋನ್ ನಂ:08354-236419 Email:dobcmbagalkote@gmail.com

ಕ್ರ.ಸಂ/ಜಿಹಿಂವ/ಸಿಬ್ಬಂದಿ/ಸಿಆರ್-30/2016-17 ದಿನಾಂಕ: 28-06-2017

ಗೆ,

Dist National Informatics Officer
(NIC) Bagalkot.

ಮಾನ್ಯರೆ,

ವಿಷಯ: 2016-17ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಅಡುಗೆಯವರು/ಅಡುಗೆ ಸಹಾಯಕರ ಹುದ್ದೆಗಳಿಗೆ ಭರ್ತಿ ಮಾಡಲು ಅರ್ಹರಾದ ಅಭ್ಯರ್ಥಿಗಳ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗುವ ಕುರಿತು.

ಉಲ್ಲೇಖ:- ಸರ್ಕಾರಿ ಆದೇಶ ಸಂಖ್ಯೆ:ಹಿಂವಕ 90 ಬಿಇಬಿ 2016 ಭಾಗ-2 ಬೆಂಗಳೂರು ದಿನಾಂಕ:27-06-2017.

*****

ಸರ್ಕಾರದ ಆದೇಶದಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ಖಾಲಿ ಇರುವ ಅಡುಗೆಯವರು-79 ಮತ್ತು ಅಡುಗೆಸಹಾಯಕರ-92 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಂದ ದಿ:22-06-2017 ಹಾಗೂ ದಿನಾಂಕ:23-06-2017 ರಂದು **ಮೂಲ ದಾಖಲಾತಿಗಳ ಪರಿಶೀಲನೆಗೆ ಹಾಜರಾಗಿರುವ ಅರ್ಹ ಅಭ್ಯರ್ಥಿಗಳಿಂದ** 1:3 ರಂತೆ ಅಡುಗೆ ತಯಾರಿಕೆಗೆ ಪ್ರಾಯೋಗಿಕ ಪರೀಕ್ಷೆ ನಡೆಸಲು ದಿನಾಂಕ:28-06-2017ರಂದು ಅಡುಗೆಯವರ ಹುದ್ದೆಗೆ ಹಾಗೂ ಅಡುಗೆ ಸಹಾಯಕರ ಹುದ್ದೆಗೆ ದಿನಾಂಕ:29-06-2017ರಂದು ನಿಗದಿಪಡಿಸಿದ್ದನ್ನು ಕಾರಣಾಂತರಗಳಿಂದ ಈ ಕೆಳಕಂಡಂತೆ ಮುಂದುಡಿದ ವೇಳಾ ಪಟ್ಟಿಯಂತೆ ಪ್ರಾಯೋಗಿಕ ಪರೀಕ್ಷೆ ನಡೆಸಲಾಗುತ್ತದೆ.

| ಹುದ್ದೆಗಳ ವಿವರ | ಪ್ರಾಯೋಗಿಕ ಪರೀಕ್ಷೆ | | |
|---|---|---|---|
| | ದಿನಾಂಕ | ವೇಳೆ | ಸ್ಥಳ |
| ಅಡುಗೆಯವರು | 03.07.2017 | ಬೆಳಗ್ಗೆ-9:30 ರಿಂದ ಸಂಜೆ 5:00ರ ವರೆಗೆ | ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರ ಬಾಲಕೀಯರ ನಿಲಯ(ವೃತ್ತಿಪರ) ಸೆಕ್ಟರ್ ನಂ:46, ನವನಗರ ಬಾಗಲಕೋಟ |
| ಅಡುಗೆ ಸಹಾಯಕರು | 04.07.2017 | ಬೆಳಗ್ಗೆ-9:30 ರಿಂದ ಸಂಜೆ 5:00ರ ವರೆಗೆ | |

ಅರ್ಹ ಅಭ್ಯರ್ಥಿಗಳು ದಾಖಲಾತಿ ಪರಿಶೀಲನೆ ಸಂದರ್ಭದಲ್ಲಿ ನೀಡಿರುವ ಚೆಕ್‌ಲಿಸ್ಟ್ ನೊಂದಿಗೆ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗುವಂತೆ ಜಿಲ್ಲಾಧಿಕಾರಿಗಳು ಬಾಗಲಕೋಟ ಇವರ ವೆಬ್‌ಸೈಟ್ http://bagalkot.nic.in ನಲ್ಲಿ ಅಪ್ ಲೋಡ ಮಾಡಲು ಕೋರಿದೆ.

ತಮ್ಮ ವಿಶ್ವಾಸಿ

ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬಾಗಲಕೋಟ